**ದಿನಾಂಕಃ 30.07.2025 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ನಂ.23 ರ ಪರ ಶ್ರೀ ಆರ್ ಕೆ ವಕೀಲರಿಂದ**.

ದಾವಾ ಶೆಡ್ಯೂಲ್ 15 ನೇ ಸ್ವತ್ತಿನ ಪಹಣಿ ಪ್ರತಿವಾದಿ ನಂ.23 ರವರ ಹೆಸರಲ್ಲಿ ಇರುತ್ತದೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ದಾವೆಯಲ್ಲಿ ಹಾಜರುಪಡಿಸಿರುವ ಪಹಣಿಗಳು ಯಾರ್-ಯಾರ ಹೆಸರಿಗೆ ಇರುತ್ತವೆ ಎಂದು ಗೊತ್ತಾ ಅಂದರೆ ಸಾಕ್ಷಿ ಗೊತ್ತು ಎನ್ನುತ್ತಾರೆ. ದಾವಾ ಶೆಡ್ಯೂಲ್ 15 ನೇ ಆಸ್ತಿಯನ್ನು 23 ನೇ ಪ್ರತಿವಾದಿ ಖರೀದಿ ಮಾಡಿ 10 ವರ್ಷಗಳು ಆಗಿರುತ್ತವೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 23 ನೇ ಪ್ರತಿವಾದಿ ದಾವಾ ಶೆಡ್ಯೂಲ್ 15 ನೇ ಆಸ್ತಿಯಲ್ಲಿ ಕೊಳವೆ ಬಾವಿ ತೆಗೆಸಿ ಆತನೆ ವ್ಯವಸಾಯ ಮಾಡುತ್ತಾನೆ ಅಂದರೆ ಸಾಕ್ಷಿ ನನ್ನ ಅಣ್ಣ 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಾನೆ ಎನ್ನುತ್ತಾರೆ. 23 ನೇ ಪ್ರತಿವಾದಿಯನ್ನು ಹೊರತುಪಡಿಸಿ ಉಳಿದ ಪ್ರತಿವಾದಿಗಳು ನಮ್ಮ ಕುಟುಂಬದ ಸದಸ್ಯರು ಅಂದರೆ ಸರಿ. ದಾವಾ ಶೆಡ್ಯೂಲ್ 15 ನೇ ಆಸ್ತಿಯನ್ನು 23 ನೇ ಪ್ರತಿವಾದಿಗೆ ನಾನು ಮತ್ತು ಇತರೆ ಪ್ರತಿವಾದಿಗಳು ಸೇರಿ ರೂ.5,80,000/- ಕ್ಕೆ ಮಾರಾಟ ಮಾಡಿರುತ್ತೇವೆ ಅಂದರೆ ಸಾಕ್ಷಿ ಬ್ಯಾಂಕಿಗೆ ಎಂದು ನನ್ನನ್ನು ಸಬ್ ರಿಜಿಸ್ಟರ್ ಆಫೀಸ್ ಗೆ ಕೆರದುಕೊಂಡು ಹೋಗಿ ಸಹಿ ಹಾಕಿಸಿರುತ್ತಾರೆ ಎನ್ನುತ್ತಾರೆ. ದಿನಾಂಕಃ 21.10.2015 ರಂದು ನೀವು ಮತ್ತು ನಿಮ್ಮ ಸಹೋದರ-ಸಹೋದರಿಯರು ಸೇರಿ ಉಪನೋಂದಣಿ ಕಚೇರಿಗೆ ಹೋಗಿ ಕ್ರಯಪತ್ರಕ್ಕೆ ಸಹಿ ಹಾಕಿರುತ್ತೀರಿ ಅಂದರೆ ಸಾಕ್ಷಿ ಸಹಿಯನ್ನು ಸುಮ್ಮನೆ ಹಾಕಿಸಿಕೊಂಡಿರುತ್ತಾರೆ ಭಾವಚಿತ್ರ ತೆಗೆದಿರುವುದು ಗೊತ್ತಿಲ್ಲ ಎನ್ನುತ್ತಾರೆ. ದಿನಾಂಕಃ 21.10.2015 ರಂದು ನಾವೆಲ್ಲರೂ ಕ್ರಯಪತ್ರದ ಬರವಣಿಗೆ ಒಪ್ಪಿ ಸಹಿ ಹಾಕಿರುತ್ತೇವೆ ಅಂದರೆ ಸರಿಯಲ್ಲ. ನಾನು ಸಹ ದಾವಾ ಶೆಡ್ಯೂಲ್ 15 ನೇ ಆಸ್ತಿಯ ಕ್ರಯಪತ್ರಕ್ಕೆ ಸಹಿ ಹಾಕಿರುವ ಕಾರಣ ನನಗೆ ಆ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾ ಆಸ್ತಿಗಳ ಮೇಲೆ ಬ್ಯಾಂಕ್ ನಿಂದ ಸಾಲ ಪಡೆಯುವಾಗ ನೀವು ತಕರಾರು ಮಾಡಿಲ್ಲ ಅಂದರೆ ಸಾಕ್ಷಿ ಸಾಲ ಬ್ಯಾಂಕ್ ನಿಂದ ತೆಗೆಯುವ ಬಗ್ಗೆ ನನಗೆ ಅವರು ತಿಳಿಸಿರುವುದಿಲ್ಲ ಎನ್ನುತ್ತಾರೆ. ಜಮೀನಿನಿಂದ ಆದಾಯ ಬರುತ್ತಿರಲಿಲ್ಲ ಆದಕಾರಣ

ಬ್ಯಾಂಕ್ ಸಾಲವನ್ನು 1 ನೇ ಪ್ರತಿವಾದಿ ತೀರಿಸಿರುವುದಿಲ್ಲ ಅಂದರೆ ಸಾಕ್ಷಿ ಆ ಬಗ್ಗೆ ನನಗೆ ಏನು ಹೇಳಿಲ್ಲ ಎನ್ನುತ್ತಾರೆ. ಬ್ಯಾಂಕ್ ಸಾಲ ತೀರಿಸುವ ಸಂಬಂಧ ದಾವಾ ಶೆಡ್ಯೂಲ್ 15 ನೇ ಆಸ್ತಿಯನ್ನು ನಾವು ಮಾರಾಟ ಮಾಡಿರುತ್ತೇವೆ ಅಂದರೆ ಸರಿಯಲ್ಲ. 2015 ನೇ ಇಸವಿಯಿಂದ ದಾವಾ ಶೆಡ್ಯೂಲ್ 15 ನೇ ಆಸ್ತಿ ಒಟ್ಟು ಕುಟುಂಬದ ಆಸ್ತಿ ಆಗಿ ಉಳಿದಿರುವುದಿಲ್ಲ ಹಾಗಾಗಿ ನನಗೆ ಆ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಶೆಡ್ಯೂಲ್ 15 ನೇ ಆಸ್ತಿಯನ್ನು ಮಾರಾಟ ಮಾಡಿದರು ಸಹ 23 ನೇ ಪ್ರತಿವಾದಿಗೆ ತೊಂದರೆ ಕೊಡುವ ಸಂಬಂಧ ಆ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಕೇಳಿರುವಂತೆ ಪರಿಹಾರ ಹೊಂದಲು ಅರ್ಹಳಿರುವುದಿಲ್ಲ ಅಂದರೆ ಸರಿಯಲ್ಲ.

**ಪಾಟಿ ಸವಾಲುಃ** ಪ್ರತಿವಾದಿ ನಂ.25 ರ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ, ಮನವಿ ತಿರಸ್ಕರಿಸಿ ಪಾಟಿ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.